# ಭಜನಾ ತರಬೇತಿ ಶಿಬಿರ

ಅಗೋಸ್ತು 6/7, 2011

ಪ್ರೊ. ಎಚ್. ಕೃಷ್ಣ ಭಟ್ಟ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಕನಕ ಅಧ್ಯಯನ ಮತ್ತು ಸಂಶೋಧನ ಪೀಠ ಎಂಜಿಎಂ ಕಾಲೇಜು ಉಡುಪಿ** ಇವರು ದಾಸ ಸಾಹಿತ್ಯ ಪ್ರಾಜೆಕ್ಟ್ ತಿರುಪತಿಯ ಉಡುಪಿ ಶಾಖೆಯ ಸಹಭಾಗಿತ್ವದಲ್ಲಿ 2011ನೇ ಅಗೋಸ್ತು 6 ಶನಿವಾರ ಹಾಗೂ 7, ಆದಿತ್ಯವಾರ ಅಂಬಲಪಾಡಿಯ ಶ್ರೀ ಜನಾರ್ದನ ಸ್ವಾಮಿ ಹಾಗೂ ಮಹಾಕಾಳಿ ದೇವಾಲಯದ ಶ್ರೀ ಭವಾನಿಮಂಟಪದಲ್ಲಿ ಕನಕ ಭಜನ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಉಡುಪಿ ಹಾಗೂ ಆಸುಪಾಸುಗಳಲ್ಲಿ ಸುಮಾರು 600 ರಷ್ಟು ಭಜನಾ ತಂಡಗಳಿದ್ದು ಅವುಗಳ ಪೈಕಿ ಸುಮಾರು 25 ತಂಡಗಳ ಇಬ್ಬಿಬ್ಬರು ಸದಸ್ಯರನ್ನು ಈ ಶಿಬಿರದಲ್ಲಿ ಭಾಗವಹಿಸುವಂತೆ ಕೇಳಿಕೊಳ್ಳಲಾಗಿತ್ತು. ಕನಕದಾಸರ ಕೀರ್ತನೆಗಳನ್ನು ಭಜನಾ ಸಂದರ್ಭದಲ್ಲಿ ಹೇಗೆ ಹಾಡಬೇಕು, ಆರಂಭ ಹಾಗೂ ಮುಕ್ತಾಯಗಳನ್ನು ತಿಳಿಯಹೇಳುವುದಲ್ಲದೆ, ಕನಕರ ಕೀರ್ತನೆಗಳಲ್ಲಿ ಕೆಲವೊಂದು ಕ್ಲಿಷ್ಟಕರವಾದ ಅಂಶಗಳಿರುವುದರಿಂದ ಅದರ ಅರ್ಥವನ್ನು ಕೂಡಾ ವಿವರಿಸಿ ಹೇಳಿದರೆ ಕೀರ್ತನೆಯನ್ನು ಹಾಡುವಾಗ ಭಾವಪೂರ್ಣವಾಗಿ ಅನುಭವಿಸಿ ಹಾಡಿದರೆ ನೋಡುವವರಿಗೂ ಕೇಳುಗರಿಗೂ ಹೆಚ್ಚು ಪರಿಣಾಮಕಾರಿಯಾಗಬಹುದೆಂಬುದು ನಮ್ಮ ಉದ್ದೇಶ. ಸುಮಾರು 70 ಮಂದಿ ಹೆಂಗುಸರು ಹಾಗೂ ಗಂಡುಸರು ಪಾಲ್ಗೊಂಡು ಇದರ ಸದುಪಯೋಗವನ್ನು ಪಡಕೊಂಡರು.

ಅಗೋಸ್ತು 6, ಶನಿವಾರ ಪೂರ್ವಾಹ್ಣ ಕಾರ್ಯಕ್ರಮವನ್ನು ದೀಪಬೆಳಗಿ ಉದ್ಘಾಟಿಸಿದ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಾನ್ಯ ಶ್ರೀ ಅಂಬಾತನಯ ಮುದ್ರಾಡಿಯವರು ಮಾತನಾಡಿ '*ಪ್ರಾಣಿ ಜಗತ್ತಿನಲ್ಲಿರುವ ಮನುಷ್ಯಪ್ರಾಣಿ ಮಾತ್ರ ಮಾತನಾಡಲು, ಚಿಂತಿಸಲು ಸಮರ್ಥನು. ಅಲ್ಲದೆ, ಚತುರ್ವಿಧ ಪುರುಷಾರ್ಥಗಳ ಬಗೆಗೆ ಸದಾ ಆಸಕ್ತನಾಗಿದ್ದು ತುರೀಯವಾದ ಮೋಕ್ಷಾಪೇಕ್ಷಿಯು. ಅವನ ಸತತ ಚಿಂತನೆಯೇ ಎತ್ತರಕ್ಕೇರಿಸುವುದು. ಇದು ಓದು, ಅಧ್ಯಯನ, ಅಭ್ಯಾಸಗಳಿಂದ ಸಾಧ್ಯ. ಆದರೂ ಅವನ ಪ್ರಯತ್ನವನ್ನು ದೈವವು ಒಪ್ಪಿ ಅನುಗ್ರಹಿಸಿದಲ್ಲಿ ಮಾತ್ರ ಮೋಕ್ಷವನ್ನು ಪಡೆಯುವುದು ಸಾಧ್ಯ. ಮೋಕ್ಷವನ್ನು ಪಡೆಯುವುದಕ್ಕೆ ಸುಲಭ ಮಾರ್ಗವೇ ನಿರಂತರ ಪರಮಾತ್ಮನಲ್ಲಿ ಭಕ್ತಿ ಹಾಗೂ ಅವನ ಹೆಸರನ್ನು ಸ್ಮರಿಸುವುದು. ಅದನ್ನೆ ಭಜನೆ/ಕೀರ್ತನೆ ಎನ್ನುತ್ತಾರೆ ಹಲವು ಮಂದಿ ಸೇರಿ ಭಜನೆ ನಡೆಸಿದರೆ ಅದನ್ನೆ ಸಂಕೀರ್ತನೆ ಎನ್ನುತ್ತಾರೆ. ಕೀರ್ತನೆಯಾಗಲಿ, ಸಂಕೀರ್ತನೆಯಾಗಲಿ ಅರ್ಥ ತಿಳಿದು ಪ್ರವರ್ತಿಸಿದಲ್ಲಿ ಹರಿಯು ಸುಲಭಗಮ್ಯನು. ಚೆನ್ನಾಗಿ ಭಾವಪೂರ್ಣವಾಗಿ ಹಾಡಲೂ, ಅರ್ಥ ತಿಳಿದು ಅನುಷ್ಠಾನಿಸಲೂ ಅನುಕೂಲವಾಗುವಂತೆ ಈ ಶಿಬಿರದಲ್ಲಿ ವ್ಯವಸ್ಥೆ ಮಾಡಿದ್ದಾರೆ. ಭಾಗವಹಿಸಿದ ನೀವು ಸಕಲವನ್ನು ಕರಗತಮಾಡಿಕೊಂಡು ಶಿಬಿರವನ್ನು ಸಾರ್ಥಕಗೊಳಿಸಿರಿ*' ಎಂದು ನುಡಿದರು.

ಧರ್ಮದರ್ಶಿ ಡಾ. ನಿ.ಬಿ ವಿಜಯ ಬಲ್ಲಾಳರು ಶಿಬಿರಕ್ಕೆ ಶುಭವನ್ನು ಹಾರೈಸಿದರು ಮತ್ತು ಇದೀಗ ಜಗತ್ತಿನಲ್ಲಿ ಬಹುಮಂದಿ ಬಯಸುವ ಶಾಂತಿ, ಸಮೃದ್ಧಿಗೆ ಆತ್ಮಸಂಸ್ಕಾರ ಮಾತ್ರ ಮಾರ್ಗವಾಗಿದ್ದು, ಈ ನಿಟ್ಟಿನಲ್ಲಿ ಸಂಕೀರ್ತನೆಗಳು ಭಜನೆಗಳು ಬಹು ಪರಿಣಾಮಕಾರಿ ಎಂದರು.

ಶಿಬಿರಾರ್ಥಿಗಳಿಗೆ ಈ ಸಂದರ್ಭದ ಉಪಯೋಗಕ್ಕಾಗಿ ಪಂಡರಾಪುರದಿಂದ ತರಿಸಿದ ಒಂದೊಂದು ಜತೆ ತಾಳಗಳನ್ನು ಪ್ರಸಾದ ರೂಪವಾಗಿ ಎಲ್ಲರಿಗೂ ನೀಡಿ ಹರಸಿದರು.

ಶಿಬಿರದ ಆರಂಭದ ದಿನ ಚಂದ್ರಶೇಖರ ಕೆದ್ಲಾಯರು ಸಂಪನ್ಮೂಲ ವ್ಯಕ್ತಿಯಾಗಿ ಶಿಬಿರಾರ್ಥಿಗಳಿಗೆ ಕನಕದಾಸರ ಸುಮಾರು ಹತ್ತು ಕೀರ್ತನೆಗಳನ್ನು ಹಾಡಲು ಹೇಳಿಕೊಟ್ಟರು. ದಿನದ ಕೊನೆಗೆ ಅವರೆಲ್ಲರೂ ಜತೆಯಾಗಿ ಹಾಡಿ ಉತ್ತಮವಾದ ಮುಕ್ತಾಯವನ್ನು ಅಂದಿನ ಕಾರ್ಯಕ್ರಮಕ್ಕೆ ನೀಡಿದರು.

ಶ್ರೀ ಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠ ಶಾಲೆಯ ಪ್ರಾಂಶುಪಾಲ ಡಾ. ಸುರೇಶಾಚಾರ್ಯರು **ಹರಿದಾಸರ ಜೀವನ ಪದ್ಧತಿ** ಕುರಿತು ಪ್ರವಚನವೊಂದನ್ನು ನೀಡಿದರು. ರಾಮಾಯಣ ಮಹಾಕಾವ್ಯದಲ್ಲಿಯ ಹನುಮಂತನೇ ದಾಸಪದದ ಆದ್ಯಪ್ರವರ್ತಕನೆಂದು ಹೇಳಿ ಅವನ ನಡೆ ನುಡಿ, ಜೀವನಾದರ್ಶಗಳೇ ಹರಿದಾಸರ ನಡೆನುಡಿ ಜೀವನಾದರ್ಶಗಳಾಗಿವೆ ಎಂದು ರಸವತ್ತಾಗಿ ಪ್ರವಚನ ಗೈದರು.

ಕೀರ್ತನೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಆ ಕೀರ್ತನೆಗಳ ಸ್ವಾರಸ್ಯ, ಕ್ಲಿಷ್ಟತೆ, ಅದರಲ್ಲಿ ಹುದುಗಿರುವ ಪೌರಾಣಿಕ ಐತಿಹಾಸಿಕ ಅಂಶಗಳನ್ನು ವಿಶ್ಲೇಷಿಸುತ್ತಾ ನೆರೆದವರನ್ನು ಜಿಜ್ಞಾಸುಗಳಾಗಿ ಪರಿವರ್ತಿಸಿದವರು ಅಂಬಾತನಯರು.

ಮುಂದೆ ವಿದ್ವಾನ್ ಗೋಪಾಲಾಚಾರ್ಯರು ದಾಸರ ಕೀರ್ತನೆಗಳಲ್ಲಿ ಬರುವ ತಾರತಮ್ಯ ಜ್ಞಾನದ ಬಗೆಗೆ, ವಿಸ್ತಾರವಾಗಿ ಪ್ರತಿಯೊಬ್ಬರಿಗೂ ಅರ್ಥವಾಗುವಂತೆ ವಿಶ್ಲೇಷಿಸಿ ಹೇಳಿದರು.

ಎರಡನೆಯ ದಿನದ ಕಾರ್ಯಕ್ರಮದಲ್ಲಿ ಕೀರ್ತನ ಶಿಬಿರವನ್ನು ಮಂಗಳೂರಿನ ಹಿರಿಯ ದಾಸ ಸಂತರಾಧಾಕೃಷ್ಣ ಬಾಳಿಗರು ನಡೆಸಿಕೊಟ್ಟರು. ಹತ್ತು ವರುಷಗಳಿಗೂ ಹೆಚ್ಚು ಕಾಲ ಧರ್ಮಸ್ಥಳದಲ್ಲಿ ನಡೆಯುತ್ತಿರುವ ವಾರ್ಷಿಕ ಭಜನಾ ಕಮ್ಮಟವನ್ನು ನಡೆಸಿಕೊಟ್ಟ ಅನುಭವದ ನೆಲೆಯಲ್ಲಿ ಉಡುಪಿಯ ಕಾರ್ಯಕ್ರಮವನ್ನೂ ಕೂಡಾ ಅಚ್ಚುಕಟ್ಟಾಗಿ ನಡೆಸಿದರು. ಸುಮಾರು 8 ಕೀರ್ತನೆಗಳನ್ನು ಶಿಬಿರದಲ್ಲಿ ಪಾಲ್ಗೊಂಡವರಿಗೆ ಹೃದ್ಗತಗೊಳಿಸಿದರು.

ವಿದ್ವಾನ್ ಸಗ್ರಿ ರಾಘವೇಂದ್ರ ಉಪಾಧ್ಯಾಯರು ಸಂಪನ್ಮೂಲ ವ್ಯಕ್ತಿಯಾಗಿ ಉತ್ತಮ ಪ್ರವಚನವನ್ನು ನೀಡಿದರು. ವಿದ್ವಾನ್ ಗೋಪಾಲಾಚಾರ್ಯರು ಕೂಡಾ ಶಿಬಿರದಲ್ಲಿ ಸಹಕರಿಸಿದರು.

ಸಮಾರೋಪ ಸಮಾರಂಭದಲ್ಲಿ ಸದ್ಯ ಮಂಗಳೂರಿನಲ್ಲಿ ನೆಲೆಸಿರುವ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎ.ವಿ ನಾವಡ ಅವರು ಪಾಲ್ಗೊಂಡಿದ್ದರು. ಸಮಾಜದಲ್ಲಿಯ ಹುಳುಕುಗಳನ್ನು ಎತ್ತಿ ಆಡಿ ಜನರ ಹೃದಯವನ್ನು ಶುಭ್ರಗೊಳಿಸಿದ ಕುಲ, ಜಾತಿ, ಸಂಪತ್ತು ಮೊದಲಾದ ನಶ್ವರ ವಿಷಯಗಳ ಬಗೆಗೆ ತಲೆಕೆಡಿಸಿಕೊಂಡು ಸ್ವಾಸ್ಥ್ಯವನ್ನು ಕಳೆಕೊಳ್ಳುವ, ಸಮಾಜದ ಸ್ವಾಸ್ತ್ಯವನ್ನು ಕೆಡಿಸುವವರ ಬಗೆಗೆ ಎಚ್ಚರಿಕೆಯ ಮಾತುಗಳನ್ನು ಆಡಿದರು.

ಭಾಗವಹಿಸಿದ್ದ ಶಿಬಿರಾರ್ಥಿಗಳು ತಾವು ವಿಶೇಷ ರೀತಿಯಲ್ಲಿ ಪ್ರಯೋಜನ ಹೊಂದಿದ್ದೇವೆ ಎಂಬುದನ್ನು ವಿವರಿಸಿದ್ದಲ್ಲದೆ, ಮುಂದೆಯೂ ವರ್ಷಂಪ್ರತಿ ಇಂತಹ ಕಾರ್ಯಕ್ರಮಗಳು ಏರ್ಪಟ್ಟು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಸರ ಕೀರ್ತನೆಗಳನ್ನು ಅಭ್ಯಾಸ ಮಾಡುವಂತಾಗಲಿ ಎಂದು ಹಾರೈಸಿದರು.